# ಪರಿಶ್ರಮ

ಡಾ. ಎಂ.ಎಸ್.ಬಿರಾದಾರ ಅವರ ಸಂಸ್ಮರಣ ಗ್ರಂಥ



Scanned with CamScanner

# ಪರಿಶ್ರಮ

## ಡಾ. ಎಂ.ಎಸ್.ಬಿರಾದಾರ ಅವರ ಸಂಸ್ಮರಣ ಗ್ರಂಥ

ಗೌರವ ಸಂಪಾದಕರು

**ಶ್ರೀ ಜಿ.ಕೆ.ಪಾಟೀಲ**

ಪ್ರಧಾನ ಸಂಪಾದಕರು

**ಡಾ. ಎಂ.ಎಸ್.ಮದಭಾವಿ**

ಪ್ರಕಾಶಕರು

**ಡಾ. ಎಂ.ಎಸ್.ಬಿರಾದಾರ ಅವರ ಸಂಸ್ಮರಣ ಗ್ರಂಥ ಸಮಿತಿ,**

ವಿಜಯಪುರ

Scanned with CamScanner

| | | |
|---|---|---|
| **Parishrama** | : | **Dr. M.S.Biradarar avar Sansmarana Grantha** |
| Editors | : | **Dr. M.S.Madabhavi, Dr. Arun Inamadar, Dr.D.R.Nidoni, Pri. M.S.Diggavi , Prof.A.S.Patil, Prof A.B.Budihal** |
| Published by | : | **Dr. M.S.Biradarar avar Sansmarana Grantha Samiti, Vijayapura** |
| First Edition | : | 2022 |
| Pages | : | xxx+280=310 |
| Copies | : | 1000 |
| Paper used | : | 70 GSM, N.S.Light Weight Maplitho |
| Price | : | Rs.500.00 |
| Printer | : | **The Print Point,** Bangaluru-44. M--9739067359 |

| | | |
|---|---|---|
| **ಪರಿಶ್ರಮ** | : | **ಡಾ. ಎಂ.ಎಸ್. ಬಿರಾದಾರ ಅವರ ಸಂಸ್ಮರಣ ಗ್ರಂಥ** |
| ಸಂಪಾದಕರು | : | **ಡಾ. ಎಂ.ಎಸ್.ಮದಭಾವಿ, ಡಾ. ಅರುಣ ಇನಾಮದಾರ, ಡಾ. ಡಿ.ಆರ್.ನಿಡೋಣಿ, ಪ್ರೊ. ಎಂ.ಎಸ್.ಡಿಗ್ಗಾವಿ, ಪ್ರೊ.ಎ.ಎಸ್.ಪಾಟೀಲ, ಪ್ರೊ.ಎ.ಬಿ.ಬೂದಿಹಾಳ** |
| ಪ್ರಕಾಶಕರು | : | **ಡಾ. ಎಂ.ಎಸ್.ಬಿರಾದಾರ ಅವರ ಸಂಸ್ಮರಣ ಗ್ರಂಥ ಸಮಿತಿ, ವಿಜಯಪುರ** |
| ಪ್ರಥಮ ಮುದ್ರಣ | : | ೨೦೨೨ |
| ಪುಟಗಳು | : | xxx+೨೮೦=೩೧೦ |
| ಪ್ರತಿಗಳು | : | ೧೦೦೦ |
| ಬಳಸಿದ ಕಾಗದ | : | ೭೦ ಜಿ.ಎಸ್.ಎಮ್. ಎನ್.ಎಸ್. ಲೈಟ್‌ವೇಟ್ ಮ್ಯಾಪ್‌ಲಿಥೊ |
| ಬೆಲೆ | : | ರೂ. ೫೦೦.೦೦ |
| ಮುದ್ರಕರು | : | **ದಿ ಪ್ರಿಂಟ್ ಪಾಯಿಂಟ್,** ಬೆಂಗಳೂರು-೪೪, ಮೊ - ೯೭೩೯೦೬೭೩೫೯ |



Scanned with CamScanner

# ಪರಿವಿಡಿ


ಶುಭ ಹಾರೈಕೆಗಳು

ಪ್ರಕಾಶಕರ ಮಾತು

ಸಂಪಾದಕೀಯ


## I


ಕನ್ನಡ ಲೇಖನಗಳು

೧. ಹೆಜ್ಜೆಯ ನೆನಪುಗಳು – ಪ್ರೊ. ಕೆ.ಎಸ್.ಬಿರಾದಾರ / ೧

೨. ದೇವರು ನನ್ನಪ್ಪ – ಅಶ್ವಿನಿ ಬಿರಾದಾರ / ೩೦

೩. ಸ್ನೇಹ ಬಂಧು – ಪ್ರೊ. ಡಾ. ಆರ್.ಎಸ್.ಮುಧೋಳ

೪. ನೆನಪಿನ ಬುತ್ತಿ ಬಿಚ್ಚಿದಾಗ – ಡಾ.ಅರುಣ ಇನಾಮದಾರ / ೩೮

೫. ಜೀವದ ಗೆಳೆಯ – ಡಾ. ಎಂ.ಎಂ.ಪಾಟೀಲ / ೪೧

೬. ಮರೆಯದ ಮಾಣಿಕ್ಯ – ಡಾ. ಶಿವಾನಂದ ಕುಬಸದ / ೪೭

೭. ನನ್ನ ದೃಷ್ಟಿಯಲ್ಲಿ – ಡಿ.ಎಸ್.ಪಾಟೀಲ / ೫೧

೮. ನಾ ಕಂಡಂತೆ – ಡಾ. ತೇಜಸ್ವಿನಿ ವಲ್ಲಭ / ೫೪

೯. ನನ್ನ ವಿದ್ಯಾರ್ಥಿ – ಎ.ಪಿ.ಮಂಟ್ಯಾಳ / ೫೭

೧೦. ಮರೆಯಾದ ಮಾಣಿಕ್ಯ – ಡಾ. ಜಿ.ಎಚ್.ಬಿರಾದಾರ / ೬೨

೧೧. ಸಾತ್ವಿಕರು – ವಿಜಯಕುಮಾರ ಹಲಕುಡೆ / ೬೪

೧೨. ಆಶ್ರಯದಾತ – ಡಾ. ಬಸವರಾಜ ಅಗಸರ / ೬೬

೧೩. ಕೃಷಿಕನಾಗಿ – ಡಾ. ಸಿದ್ಧಣ್ಣ ಉತ್ನಾಳ / ೬೮

೧೪. ಬಸವ ಪ್ರಣೀತ – ಡಾ. ಸಂಗ್ರಾಮ ಬಿರಾದಾರ / ೭೪

೧೫. ಕ್ರಿಯಾಶೀಲರು – ಅರವಿಂದ ಕಂಬ್ಯಾಣಿ / ೭೬




Scanned with CamScanner

೧೬. ಬಸವನಾಡಿನ ವೈದ್ಯ – ಡಾ. ಎಸ್.ಕೆ.ಬಿರಾದಾರ / ೭೯
೧೭. ವೈದ್ಯ ಶ್ರೇಷ್ಠ – ಡಾ. ಡಿ.ಆರ್.ನಿಡೋಣಿ / ೮೨
೧೮. ನನ್ನ ಅನುಭವಗಳು – ಡಾ. ಸಲೀಮ ದುಂಡಸಿ / ೮೭
೧೯. ನಮ್ಮೊಂದಿಗೆ – ಡಾ. ಜ್ಯೋತಿ ಕೊದ್ನಾಪುರ (ಹೊನಗನಹಳ್ಳಿ) / ೯೦
೨೦. ಪರಿಶ್ರಮದ ಫಲ – ಪ್ರೊ. ವಿಲಾಸ ಸಿದ್ಧನಗೌಡ ಬಗಲಿ ಪಾಟೀಲ / ೯೨
೨೧. ನಲ್ಮೆಯ ಗೆಳೆಯ – ಡಾ. ಶಫೀ ಮುಲ್ಲಾ / ೯೪
೨೨. ಮಧುರ ಸ್ನೇಹಿ – ಪ್ರೊ. ಎಂ.ಎಸ್.ಝುಳಕಿ / ೯೬
೨೩. ಅರಳಿದ ಕಮಲ – ಪ್ರೊ. ಕೆ.ಆರ್.ಶೇಗುಣಸಿ / ೯೯
೨೪. ಕೃಷಿ ಪ್ರೇಮಿ – ಡಾ. ಶಶಿಧರ ಶಿರಹಟ್ಟಿ ಮತ್ತು ಡಾ. ಮಹೇಶ್ವರ ಶಿರಹಟ್ಟಿ / ೧೦೧
೨೫. ವೈದ್ಯೋ ನಾರಾಯಣೋ ಹರಿ – ಡಾ. ಬನದೇವಿ ಬಿರಾದಾರ ಡಾ. ಸದಾಶಿವ ಸವದಿ / ೧೦೫
೨೬. ಆತ್ಮೀಯತೆಯ ಬದುಕು – ಡಾ. ಭಾರತಿ ಕಾಸ್ನಿಸ್ / ೧೦೭
೨೭. ನುಡಿ ನಮನ – ದಾಕ್ಷಾಯಣಿ ಬಿರಾದಾರ / ೧೦೮
೨೮. ನಲ್ಮೆಯ ಗುರು – ಡಾ.ಕೃಷ್ಣಮೂರ್ತಿ ಜಾಲಿಹಾಳ/೧೧೦
೨೯. ಮಂದಾರ – ಡಾ.ಅಮೀರುದ್ದೀನ್ ಅ.ಖಾಜಿ/೧೧೨
೩೦. ಧರ್ಮಪತ್ನಿ ಗೋದಾವರಿಯವರೊಂದಿಗೆ ಸಂದರ್ಶನ – ಡಾ. ವ್ಹಿ.ಡಿ.ಐಹೊಳ್ಳಿ / ೧೧೪
೩೧. ಅಪರೂಪದ ವೈದ್ಯ – ನಾಡೋಜ ಡಾ. ಎಚ್.ಜಿ.ದಡ್ಡಿ /೧೨೧

## II

**English Articles**

1. **A Selfless Karmayogi** – Prof. B.G.Mulimani / 127
2. **Dr. MSBiradar - As I remember** – Dr. Kushal Das / 131
3. **An outstanding doctor** – Prof. Dr. Gustavo Zubieta Calleja / 137
4. **Dr. MSBiradar - As I Know him** – Dr. P.L.Kariholu / 140

5. A Doctors' Doctor – Prof. S.H.Lagali / 143
6. My Father "A Human par Excellence" – Dr. Aruna M. Biradar / 146
7. Dr. M.S.B.–As I Know him– Dr. Cauvery Sethe / 151
8. My Professional and Personal experiences with Dr. M.S.Biradar – Dr. Manjunath Aithal / 154
9. Dear Mamari – Dr. Bipin Patil / 166
10. Some reminiscences of Dr. M.S.Biradar – Dr. V. Gopalan / 171
11. An administrator par excellence – Dr. J.G.Ambedkar / 176
12. My personal experiences with Dr. M.S.Biradar – Nabirasool .S. Mamadapur / 178
13. We miss you sir – Dr. Prabhugouda Patil and Family / 183
14. Dr. M.S.Biradar - A Leader– Dr. B.C.Uppin / 184
15. A Textual Tribute to Dr. MSBiradar – Dr. Satish Jigaginni / 186
16. My personal and professional relation with Dr. M.S.Biradar – Dr. Anand Ambali / 193
17. The greatest Mentor ever lived – Dr. M.M.Patil (Tikota)/ 199
18. Dr. M.S.Biradar – An academician and Administrator – Dr. B.S.Patil / 203
19. Remembering Dr. M.S.Biradar – Dr. S.B.Patil / 206
20. A dedicated and committed doctor – Dr. Hibare.S.R / 208



Scanned with CamScanner

21. My personal and professional relationship with Dr. M.S.Biradar – Prabhu S. Telagi / 210
22. My guiding light – Dr.Rajesh M.Honnutagi/213
23. A great human being – Dr. Anand Pandurangi/ 216
24. An unforgettable Doctor – Basavaraj Desai / 218
25. A physician of discipline and wisdom – Dr. H.V.Karigoudar / 220
26. A great genius – Dr.Nagappa H.Handargal/223
27. A humane human being – Prasanna Badami and Praveen Badami / 226

**Appendix**

1. Addresses / 231
2. Photos / 237

* * *



Scanned with CamScanner

೫

# ಜೀವದ ಗೆಳೆಯ

• ಡಾ. ಎಂ.ಎಂ.ಪಾಟೀಲ

**ಹು**ಟ್ಟೂರ ಉಕ್ಕಲಿಯಲ್ಲಿ ಬೆಳೆಯುವ ಸಿರಿಮೊಳಕೆಯಲ್ಲಿ ಕಾಣಬೇಕೆನ್ನುವ ಮಾತು ಮಲ್ಲನಗೌಡರ ಬಾಲ್ಯದ ಬೆಳಕು ನಾನು ಕಣ್ಣಾರೆ ಕಂಡಿರುವೆ ಆ ಹಿನ್ನೆಲೆ ನೆನಪು ಮತ್ತೊಮ್ಮೆ ನೆನಿಸಿಕೊಂಡು ಶಬ್ದಗಳಲ್ಲಿ ಚಿತ್ರಿಸಲು ಪ್ರಯತ್ನ ಮಾಡಿರುವೆ. ಅದು ಓದುಗರಿಗೆ ಒಂದು ತರದ ತಮ್ಮ ಬಾಲ್ಯ ನೆನಪು ಮರುಕಳಿಸಿದರೆ ಸಾಕು. ನಾನು ಕೂಡ ತಮ್ಮೊಂದಿಗೆ ಆನಂದಿಸಿದಂತೆ ಸರಿ ತಾನೆ! ಸನ್ಮಾನ್ಯ ಡಾ॥ ಮಲ್ಲಗೌಡರು ಕುಲಪತಿಗಳಾಗಿ ಬೆಳೆದರೂ ನನಗೆ ಮಾತ್ರ ಅವರ ಬಾಲ್ಯದ ನನ್ನೊಂದಿಗಿರುವ ಸ್ನೇಹ ಸೇತುವೆ ಇಂದಿಗೂ ಕಾಣುತ್ತಿರುತ್ತೆಂದು ಹೇಳಿದರೇ ತಪ್ಪಾಗಲಾರದು. ಆ ನಮ್ಮಿಬ್ಬರ ತುಂಟಾಟ ಕಣ್ಣಿಗೆ ಕಟ್ಟಿದಂತೆ ಇಂದಿಗೂ ಆ ಚಿತ್ರ ಹಾಯ್ದುಹೋಗುತ್ತಿದೆ. ನಮ್ಮೊಂದಿಗೆ ಕಾಸಪ್ಪ ಸಿಂದಗಿ, ಗುರುಬಸಪ್ಪ ಹಣಮಶೆಟ್ಟಿ, ಬಾಳಾಸಾಹೇಬ ಕಾಮಗೊಂಡ, ಪ್ರಭು ತೆಲ್ಲಗಿ, ನೀಲಪ್ಪ ಮಸಳಿ ಮತ್ತು ವಿಶ್ವನಾಥ ಡೋಣೂರ ಇದ್ದರು. ಸಂಜೆ ಹಾಯಸ್ಕೂಲಿನ ಗ್ರೌಂಡದಲ್ಲಿ ಕಬ್ಬಡ್ಡಿ, ಖೋ-ಖೋ, ಗೋಲಿ ಆಟ, ಮಾವಿನ ಗೊಟ್ಟಿನ, ಚಿಣಪಣಿ (ಚಿಣಿದಾಂಡ) ಅಲ್ಲದೆ ಮುಂಜಾನೆ ಹಾಲು ಬಾವಿಯಲ್ಲಿ ಈಜುತ್ತ ನೀರಾಡುತ್ತಾ ಒಬ್ಬರ ಮುಖಕ್ಕೆ ಮಗದೊಬ್ಬರು ನೀರು ಸಿಡಿಸುವುದೊಂದು ಹಬ್ಬವಾಗಿ ನಮಗೆಲ್ಲಾ ಒಂದು ತರದ ಆನಂದ ಪ್ರತಿಯೊಬ್ಬರ ಮುಖದಲ್ಲಿ ಎದ್ದು ತೋರುತ್ತಿತ್ತು.

ಈ ಬಾಲ್ಯ ಸಂದರ್ಭವನ್ನು ಇಂದಿಗೂ ನಾವಿಬ್ಬರು ಕೂಡಿದಾಗ ನೆನಪಿಸಿಕೊಂಡು ಆನಂದ ತುಂದಿಲರಾಗಿ ಅರ್ಥಾತ ಭಾವುಕರಾಗಿ ಬಿಡುತ್ತಿದ್ದರು. ನಕ್ಕು ನಕ್ಕು ಕಣ್ಣಿನ ಅಂಚಿನಲ್ಲಿ ಅನಂದದ ಹನಿ ಹೊರ ಹೋಗಿ ನಮ್ಮಿಬ್ಬರ ಹೃದಯ ಮತ್ತೊಮ್ಮೆ ಬಾಲ್ಯ ಸ್ನೇಹದ ಸಂವರ್ಧನೆ, ಈ ಶಬ್ದಗಳಿಗೆ ನಿಲುಕಲಾರದೆಂಬ ಭಾವ ನನ್ನದಾಗಿದೆ ಕುಲಪತಿಗಳ ಸ್ಥಾನದಲ್ಲಿದ್ದರೂ ಸಹ ಯಾವ ಹಮ್ಮು ಬಿಮ್ಮುಗಳಿಲ್ಲದೆ ಬಾಲ್ಯದ ಬೆಳಕನ್ನು ಇಂದಿಗೂ ನೆನಪಿಸಿಕೊಂಡು ಪಡುವ ಆನಂದ ಅಮಿತಾ-ನಂದವಾಗಿ ತೋರುತ್ತಿತ್ತು.



Scanned with CamScanner

## ಬಾಲ್ಯ ತುಂಟಾಟ ಮುಂದುವರಿದಂತೆ ಪ್ರಾಥಮಿಕ ಶಾಲೆಯ ದಿನಗಳು

ನಾನು ಒನೇ ತರಗತಿಯಲ್ಲಿ ಓದುತ್ತಿರುವಾಗ ಮಲ್ಲು ಎರಡನೆಯ ತರಗತಿಯಲ್ಲಿದ್ದರು. ಉಕ್ಕಲಿ ಚವಡಿ ಎದುರಿಗೆ ಹಳೆ ಕಟ್ಟಡದಲ್ಲಿ ಶಾಲೆ ಪ್ರಾರಂಭಿಸಲಾಗಿತ್ತು. ಆಗ ಕಂಠಪಾಠ ಮಾಡಿ ಹೇಳುವ- ಹೇಳಿಸುವ ರೀತಿ ಹೆಚ್ಚಾಗಿತ್ತು. ಸಂಜೆ ಮುಂದೆ ಎಲ್ಲರೂ ಗೋಲಾಕಾರವಾಗಿ ನಿಂತು ಅಂಕಿ ಮಗ್ಗಿಗಳನ್ನು ಹೇಳಿಸುವುದು ತಪ್ಪಿದರೆ ಮಗ್ಗಲು ನಿಂತ ವಿದ್ಯಾರ್ಥಿಯಿಂದ ಮುಷ್ಟಿಕ್ಕೆ ಅಂಗಿ ಇಲ್ಲದ ಕಪಾಳಕ್ಕೆ ಹೊಡಿಸುತ್ತಿದ್ದರು.

ಮಲ್ಲು ನಾಲ್ಕನೆಯ ಕ್ಲಾಸಿನಲ್ಲಿ ಓದುತ್ತಿದ್ದಾಗಲೆ ಗುರುಗಳು ವರ್ಧಮಾನ ಮಹಾವೀರ ಪಾಠ ಓದೆಂದು ಹೇಳಿದಾಗ ಪುಸ್ತಕ ಓದಿಯದೆ ಕಂಠಪಾಠ ಮಾಡಿ (ಬಾಯ್ಪಟ್ಟು) ಹೇಳಿ ಎಲ್ಲರನ್ನು ಚಕಿತರನ್ನಾಗಿಸಿದ್ದ. ಇಂದಿಗೂ ನನಗೆ ಅವರ ಸ್ಮರಣಶಕ್ತಿ ಹೇಗಿತ್ತೆಂದು ಹೇಳಲು ಶಬ್ದಗಳೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಮುಂದೆ ನಾನು ಐದನೇ ಕ್ಲಾಸಿಗೆ ವಿಜಯಪುರಕ್ಕೆ ಬರಬೇಕಾಯಿತು. ನಮ್ಮ ಚಿಕ್ಕಪ್ಪ ಕೆ.ಡಿ.ಪಾಟೀಲರು (ಮಾಜಿ ಎಂ.ಎಲ್.ಎ) ನನ್ನನ್ನು ನಮ್ಮ ತಂದೆಗೆ ಗೊತ್ತಾಗದಂತೆ ಎಸ್.ಎಸ್.ಹಾಯಸ್ಕೂಲದಲ್ಲಿದ್ದ ಶಾಲೆಗೆ ಹಚ್ಚಿದ್ದರು.

ನನ್ನ ದೊಡ್ಡಪ್ಪ ಸನ್ಮಾನ್ಯ ಬಾಪುಗೌಡರು ಸಮುದ್ರದ (ಉಕ್ಕಲಿ) ವಿದ್ಯಾರ್ಥಿಗಳು ವಿಜಯಪುರಕ್ಕೆ ಬಂದು ಕಲಿಯಲು ಸಾಧ್ಯವಿಲ್ಲೆಂದು ಚಿಂತಿಸಿ ವಿಶ್ವ ಪ್ರಯತ್ನ ಮಾಡಿ ಬಿ.ಎಲ್.ಡಿ.ಇ ಸಂಸ್ಥೆಯಿಂದ ಉಕ್ಕಲಿಯಲ್ಲಿ ಹಾಯಸ್ಕೂಲ ಪ್ರಾರಂಭಿಸಿದರು. ಇದರ ಮುಖ್ಯದ ಫಲವೇ ಮಲ್ಲುಗೌಡ್ರು ಡಾಕ್ಟರಾಗಿ ಮುಂದೆ ಕುಲಪತಿಗಳಾಗಿ ಹೆಸರು ಮಾಡಲು ಸಾಧ್ಯವಾಯಿತೆಂದು ಹೇಳಿದರೆ ತಪ್ಪಾಗಲಾರದು. ಕಾರಣ ಇಷ್ಟೇ, ಮಲ್ಲುನ ತಂದೆ ಶಿವನಗೌಡ್ರು ಶಾಲೆ ಬಿಡಿಸಿ ಒಕ್ಕಲತನಕ್ಕೆ ಹಚ್ಚಿದ್ದರು. ಈ ಜಾಣ ವಿದ್ಯಾರ್ಥಿಯ ಸಲುವಾಗಿ ನಾನು (ಬಾಪುಗೌಡ್ರು) ವಿಶ್ವ ಪ್ರಯತ್ನ ಮಾಡಿ ಉಕ್ಕಲಿಗೆ ಬಿ.ಎಲ್.ಡಿ.ಇ ಸಂಸ್ಥೆಯಿಂದ ಹಾಯಸ್ಕೂಲ ತೆರೆದಿರುವೆ. ಸ್ವತಃ ಶಿವನಗೌಡರಿಗೆ ಹೇಳಿ ಒತ್ತಾಯದಿಂದ ಮಲ್ಲು ನನ್ನ ಹಾಯಸ್ಕೂಲ ಹಚ್ಚಿಸಿದರೆಂಬುದು ಬಹು ಮುಖ್ಯವಾದ ಸಂಗತಿ ಎಂದೇ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗಿದೆ.

ಈ ಮೇಲಿನ ಸಂಗತಿಯನ್ನು ನನ್ನ ಮುಂದೆ ಡಾ॥ ಮಲ್ಲುಗೌಡ್ರು ಸವಿವರವಾಗಿ ಹೇಳುವಾಗ ಭಾವುಕರಾಗಿ ಗದ್ಗದಿತರಾಗಿ ಮಾತುಗಳೇ ಹೊರಡುತ್ತಿರಲಿಲ್ಲ. ನಂತರ ಸಾವಕಾಶವಾಗಿ ಅಂದು ಬಾಪುಗೌಡ ಉಕ್ಕಲಿ ಗ್ರಾಮದಲ್ಲಿ ಹಾಯಸ್ಕೂಲ ಪ್ರಾರಂಭಿಸದಿದ್ದರೆ ನಾನು ಈ ಮಟ್ಟಕ್ಕೆ ಬರಲು ಹೇಗೆ? ಸಾಧ್ಯವಿತ್ತು. ಈಗಾಗಲೇ ನಮ್ಮ ತಂದೆ ಒಕ್ಕಲುತನಕ್ಕೆ ಹಚ್ಚಿ ಬಿಟ್ಟಿದ್ದರು.

ಈ ಹಾಯಸ್ಕೂಲಕ್ಕೆ ಶ್ರೀ ಎಸ್.ಟಿ. ಜನಗೌಡ್ರು ಹೆಡ್‌ಮಾಸ್ತರರಾಗಿ ಬಂದರು. ತದನಂತರ ಒಮ್ಮೆ ಜನಗೌಡ ಸರ್ ಅವರು ರಾತ್ರಿ ಊಟ ಮಾಡಿ ಬಾಪುಗೌಡ್ರ



Scanned with CamScanner

ಮುಂದೆ ಮಾತನಾಡುವಾಗ್ಗೆ ಆ ನಿಮ್ಮೂರು ವಿದ್ಯಾರ್ಥಿ ಮಲ್ಲು ಆಗಸ್ಟ ಹದಿನೈದರ ಸಂದರ್ಭದಲ್ಲಿ ಸ್ವಾತಂತ್ರ್ಯ ಕುರಿತು ಮಾತನಾಡಿದ ರೀತಿ ಹೇಳುವ ಪ್ರತಿಭೆ ನನ್ನನ್ನು ಸಂಪೂರ್ಣ ಗಾಬರಿ ಮಾಡಿದೆ. ಸ್ವತಃ ನಾನೇ ಹೀಗೆ ಮಾತನಾಡಲು ಸಾಧ್ಯವಿಲ್ಲೆಂದು ಹೇಳಿದ ಮಾತನ್ನು ಇಲ್ಲಿ ಇಂದು ನೆನಪಿಸಿಕೊಳ್ಳಬೇಕಾಗಿದೆ. ಕುಲಪತಿಗಳ ಪ್ರತಿಭೆಯ ಪ್ರೌಢ ಹಾಯಸ್ಕೂಲದಲ್ಲಿಯೇ ಕಂಡುಕೊಂಡಿದ್ದರೆಂದು ಹೇಳಲಾಗಿದೆ.

೧೯೭೩-೧೯೭೪ಳ ಕೆಸಿಪಿ ಸೈನ್ಸ್ ಕಾಲೇಜಿಗೆ ಕೀರ್ತಿ (ಹೆಚ್ಚು ಅಂಕಗಳಿಸಿ) ತಂದರು. ಆದ್ದರಿಂದ ಮೆಡಿಕಲ್ ಸೀಟು ದೊರೆಯಲು ಸಾಧ್ಯವಿದ್ದರೂ ಕೂಡ (ಆರ್ಥಿಕ ಸ್ಥಿತಿ) ಕೃಷಿ ಪ್ರಧಾನವಾದ ಕುಟುಂಬದಲ್ಲಿ ಜನಿಸಿದ ಮಲ್ಲುಗೆ ಕೃಷಿಯೇ ಮುಖ್ಯವೆಂದು ಭಾವಿಸಿಕೊಂಡು ಧಾರವಾಡ ಕೃಷಿ ಕಾಲೇಜಿಗೆ ಹೆಸರು ನೋಂದಾಯಿಸಿದರು.

೧೯೭೪ರಲ್ಲಿ ನಾನು ಎಂ.ಬಿ.ಬಿ.ಎಸ್. ೨ನೇ ವರ್ಷ ಓದುತ್ತಿರುವಾಗ ಬೇಸಿಗೆಯ ರಜೆ ದಿನದಲ್ಲಿ ವಿಜಯಪುರಕ್ಕೆ ಬಂದಾಗ್ಗೆ ನನ್ನ ಚಿಕ್ಕಪ್ಪರಾದ ಶ್ರೀ ಕೆ.ಡಿ.ಪಾಟೀಲರು ಎಂ.ಎಲ್.ಎ ಆಗಿದ್ದರು. ಮಲ್ಲನಗೌಡರು ಭೇಟಿಯಾಗಲು ಬಂದಿದ್ದರು. ಆವಾಗ್ಗೆ ನಾನು ಈತನ ಅಂಕಗಳನ್ನು ಕಂಡು ಸರಕಾರಿ ಕೋಟಾದಲ್ಲಿ ಮೆಡಿಕಲ್ ಸೀಟು ಸಿಗುವಾಗ ಯಾಕೆ ಒಲ್ಲೆನ್ನುತ್ತಾನೆಂದು ನಾನು ಕೇಳಿದಾಗ ವೈದ್ಯಕೀಯ ಕೋರ್ಸಿಗೆ ಹೆಚ್ಚು ಖರ್ಚು ಬರುವುದರಿಂದ ಮತ್ತು ನನಗೆ ಆರ್ಥಿಕ ಸ್ಥಿತಿ ಸರಿ ಇಲ್ಲವೆಂದು ಹೇಳಿದನು. ಆಗ ಶಾಸಕರು ಕೃಷಿ, ಮೆಡಿಕಲ್ ಖರ್ಚು ಒಂದೇ, ನೀನು ರ್‍ಯಾಂಕ ಬಂದಿದ್ದರಿಂದ ನಿನಗೆ ಫೀ ವಗೈರೆ ಇಲ್ಲವೆಂದು ತಿಳಿ ಹೇಳಿ ಒಂದು ವೇಳೆ ಹೆಚ್ಚು ಖರ್ಚು ಬಂದರೆ ನನ್ನ ಜವಾಬ್ದಾರಿ ಎಂದು ಹೇಳುತ್ತಾ ಧೈರ್ಯ ತುಂಬಹತ್ತಿದ್ದರು. ಅಲ್ಲದೆ ಇವನ ತಂದೆಯನ್ನು ಕರೆಯಿಸಿಕೊಂಡು ಎಲ್ಲಾ ವಿವರ ತಿಳಿ ಹೇಳಿ ಮನಸ್ಸು ಬದಲಾಯಿಸಿ, ಈತನನ್ನು ಮೆಡಿಕಲ್ ಕಾಲೇಜಿಗೆ ಹಚ್ಚಿದ ಶ್ರೇಯಸ್ಸು ಕೆ.ಡಿ.ಪಾಟೀಲರಿಗೆ ಸಲ್ಲಬೇಕು ಸಲ್ಲಲೇಬೇಕು.

ನಾನು ೩ನೇ ಎಂ.ಬಿ.ಬಿ.ಎಸ್. ಇದ್ದುದರಿಂದ ಎಲ್ಲಾ ರೀತಿಯಿಂದ ಸಹಾಯ-ಸಹಕಾರ ನೀಡುವುದರೊಂದಿಗೆ ಬಾಲ್ಯದ ಸ್ನೇಹ ನೆನಪಿಸಿ, ಹೆಚ್ಚಿನ ಆಸಕ್ತಿಗೆ ಅನುವು ಮಾಡಿಕೊಟ್ಟೆ.

ಬಾಲ್ಯದ ಬದುಕಿನಲ್ಲಿ ಚಿತ್ರ ವಿಚಿತ್ರವಾದ ಘಟನಾವಳಿಗಳು ಬಂದು ಹೋಗುತ್ತಿರುವುದಕ್ಕೆ ಮೇಲಿನ ಉದಾಹರಣೆ ಕೊಟ್ಟಿದ್ದೇನೆ. ಇದೊಂದು ಜ್ವಲಂತ ಉದಾಹರಣೆಯೆಂಬುದನ್ನು ಇಲ್ಲಿ ಸ್ಮರಿಸಿಕೊಂಡಿದ್ದೇನೆ.

ಇನ್ನೊಂದು ಘಟನೆ ೧೯೭೫ರಲ್ಲಿ ಕೆ.ಎಂ.ಸಿ.ಯಲ್ಲಿ ಕಲಿಯುತ್ತಿರುವ ಸಂದರ್ಭದಲ್ಲಿ, ವಿದ್ಯಾರ್ಥಿನಿಯೊಬ್ಬಳು ಸಹಪಾಠಿಯಾಗಿದ್ದಳು. ಇವರಿಗಿಂತಲೂ ಜಾಣ ವಿದ್ಯಾರ್ಥಿ ಈ ಮುಗ್ಧ ಎಂ.ಎಸ್.ಬಿರಾದಾರವರಿಗೆ ಆ ವಿದ್ಯಾರ್ಥಿನಿ



Scanned with CamScanner

ಹೆಸರಿನಿಂದ ಕೂಗು; ಇರದಿದ್ದರೆ ನಿನ್ನನ್ನು ಹಾಸ್ಟೇಲದಿಂದ ಹೊರಹಾಕುವೆ ಎಂದು ಜೋರಾಗಿ ಬೆದರಿಸಿದರು ಅಂಜಿದ ಎಂ.ಎಸ್.ಬಿರಾದಾರ ಅವಳ ಹೆಸರನ್ನು ಜೋರಾಗಿ ಕೂಗಿ ಬಿಟ್ಟ. ಆಕೆ ಸೀದಾ ಹೋಗಿ ಪ್ರಿನ್ಸಿಪಾಲರ ಕಡೆಗೆ ಕಂಪ್ಲೇಟು ಮಾಡಿದಳು. ಈ ಸಂದರ್ಭದಲ್ಲಿ ನಾನು ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದೆ. ನಾನು ಧೈರ್ಯತುಂಬಿ ಪ್ರಾಚಾರ್ಯರಿಗೆ ಭೇಟಿಯಾಗಿ ನಿಜ ಸಂಗತಿ ಅರುಹಿದೆ. ಆಗ ಎಂ.ಎಸ್.ಬಿರಾದಾರ (ಈ ಕಾರ್ಯ ಮಾಡಿಸಿದ ವಿದ್ಯಾರ್ಥಿ ಹಾಸ್ಟೇಲ್ ಹಾಗೂ ಕಾಲೇಜಿನ ಗ್ಯಾಂಗ ಲೀಡರ್ ಆಗಿದ್ದ ಸೂಕ್ಷ್ಮಮತಿಯಾದ ಎಂ.ಎಸ್.ಬಿರಾದಾರರವರು ಹಾಸ್ಟೇಲ್ ಬಿಟ್ಟು ಉಕ್ಕಲಿಗೆ ಹೋಗುವ ತಯ್ಯಾರಿಯಲ್ಲಿದ್ದರು.) ಆಗ ಅವರು ನಿಟ್ಟುಸಿರು ಬಿಟ್ಟರು.

೧೯೭೫-೧೯೭೬ ಪ್ರಥಮ ವರ್ಷದ ಎಮ್.ಬಿ.ಬಿ.ಎಸ್. ಡಿಸ್ಟಿಂಕ್ಷನ್‌ದಲ್ಲಿ

೧೯೭೬-೧೯೭೭ ದ್ವಿತೀಯ ವರ್ಷದ ಎಮ್.ಬಿ.ಬಿ.ಎಸ್ ಪ್ರಥಮ ಶ್ರೇಣಿ

೧೯೭೯- ಎಮ್.ಬಿ.ಬಿ.ಎಸ್. ಕೊನೆಯ ವರ್ಷದಲ್ಲಿ ದ್ವಿತೀಯ ಸ್ಥಾನ ಬಂಗಾರದ ಪದಕ ಗಳಿಸಿದನು.

೧೯೮೦ - ಸಪ್ಟೆಂಬರ್ ಎಂ.ಡಿ. ಸೀಟು ಬಳ್ಳಾರಿ ಮೆಡಿಕಲ್ ಕಾಲೇಜದಲ್ಲಿ ದೊರೆಯಿತು.

೧೯೮೦-೧೯೮೨ ಬಳ್ಳಾರಿಯಲ್ಲಿ

೧೯೮೨-೧೯೮೩ರಲ್ಲಿ ಬೆಂಗಳೂರಿನಲ್ಲಿ ವಿವಿಧ ಹಾಸ್ಟೇಲದಲ್ಲಿದ್ದಾಗ ನಾನು ಕೂಡ ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿದ್ದೆ, ನಮ್ಮಿಬ್ಬರ ಸ್ನೇಹ ಮತ್ತೆ ಮುಂದುವರೆಯಿತು.

೧೯೮೩ ಎಂ.ಡಿ. ಬಂಗಾರ ಪದಕದೊಂದಿಗೆ ತೇರ್ಗಡೆಯಾಗಿದ್ದರು.

ಬಳ್ಳಾರಿ ಜಿಲ್ಲೆ ಬೆಳ್ಳಿಗಟ್ಟ ಸರಕಾರಿ ಆಸ್ಪತ್ರೆಗೆ ವೈದ್ಯಾಧಿಕಾರಿಗಳಾದರು.

೧೯೮೮ರಲ್ಲಿ ವಿಜಯಪುರ ಸರಕಾರಿ ಆಸ್ಪತ್ರೆಗೆ ವರ್ಗವಾಗಿ ಬಂದರು.

ನಾನು ಕೂಡ ಪಿ.ಜಿ. ಮುಗಿಸಿಕೊಂಡು ವಿಜಯಪುರಕ್ಕೆ ಬಂದೆನು. ಮತ್ತೆ ನಮ್ಮಿಬ್ಬರ ಸ್ನೇಹ ವಿದ್ಯಾರ್ಥಿಯಿಂದ ಪ್ರಾರಂಭವಾಗಿ ಸ್ವಂತ ಜಿಲ್ಲೆಯಲ್ಲಿ ಇಬ್ಬರು ಸ್ನೇಹಿತರಾಗಿ ಸೇವೆ ಮಾಡುವ ಪ್ರಸಂಗ ಒದಗಿದ್ದೊಂದು ಯೋಗಾಯೋಗವೇ ಸರಿ.

ಡಾ॥ ಎಂ.ಎಸ್. ಬಿರಾದಾರ ಅವರು ಹೊರಗೆ ೧೯೮೮ರಲ್ಲಿ ಪ್ರ್ಯಾಕ್ಟೀಸ್ ಪ್ರಾರಂಭಿಸಿದರು. ಅವರ ನಂತರ ೧೯೮೮ರಲ್ಲಿ ನಾನು ಪ್ರಾಕ್ಟಿಸ್ ಪ್ರಾರಂಭಿಸಿದೆನು. ೧೯೮೬ರಲ್ಲಿ ನಾನು ಅಲ್ ಅಮೀನ ಮೆಡಿಕಲ್ ಕಾಲೇಜದಲ್ಲಿ ರೇಡಿಯೋಲಾಜಿ



Scanned with CamScanner

ಉಪನ್ಯಾಸಕನಾಗಿ ವೃತ್ತಿಯನ್ನು ಪ್ರಾರಂಭಿಸಿದೆ. ಇಲ್ಲಿ ಮತ್ತೆ ಎಂ.ಎಸ್.ಬಿರಾದಾರರವರು ಮೆಡಿಕಲ್ ವಿಭಾಗದ ಉಪನ್ಯಾಸಕರಾಗಿ ಬಂದರು. ಇಬ್ಬರ ಸ್ನೇಹ ಸೇತುವೆ ವೃತ್ತಿ ಜೀವನದ ಮೊದಲ ಹಂತದಲ್ಲಿಯೇ ಕೂಡಿಕೊಂಡೆವು. ಮುಂದೆ ನಮ್ಮಿಬ್ಬರ ಸೇವೆ ಬಿ.ಎಂ.ಪಾಟೀಲ ಮೆಡಿಕಲ್ ಕಾಲೇಜದಲ್ಲಿ ಪ್ರಾರಂಭವಾಯಿತು. ಪ್ರಾಥಮಿಕ ಶಾಲೆಯಿಂದ ಪ್ರಾರಂಭವಾದ ಸ್ನೇಹ ಸೇತುವೆ ಈಗ ಬಿ.ಎಂ.ಪಾಟೀಲ ಮೆಡಿಕಲ್ ಕಾಲೇಜಕ್ಕೆ ಬಂದು ತಲುಪಿತು.

ನಾವಿಬ್ಬರೂ ೧೯೮೪-೮೫ರಲ್ಲಿ ನಾನು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಗ ನಾವಿಬ್ಬರು ೧೯೮೬ರಿಂದ ೧೯೯೧ರವರೆಗೆ ಉಪನ್ಯಾಸ ಮತ್ತು ಸ್ವಲುದ್ಯೋಗವನ್ನು ಮುಂದುವರೆಸಿದೆನು. ಜೊತೆಗೆ ಸ್ವ ಉದ್ಯೋಗ ಪ್ರಾರಂಭಿಸಿದೆ. ಅಷ್ಟರಲ್ಲಿ ನಾನು ಮತ್ತೆ ಡಾ॥ ಎಂ.ಎಸ್.ಬಿರಾದಾರವರು ೧೯೯೧ರಲ್ಲಿ ಬಿ.ಎಂ.ಪಾಟೀಲರ ಆಜ್ಞೆಯಂತೆ ನಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಲ್ಲಿ ಕಾರ್ಯ ಪ್ರಾರಂಭಿಸಿ ಮತ್ತೆ ಬಾಲ್ಯದ ನೆನಪುಗಳು ಮತ್ತಷ್ಟು ಗಟ್ಟಿ ಆಗುವ ಪರ್ವಕಾಲ ಒದಗಿತೆಂದು ಹೇಳಿದರೆ ತಪ್ಪಾಗಲಾರದು.

ಡಾ॥ ಎಂ.ಎಸ್.ಬಿರಾದಾರರವರು ಪ್ರಾಧ್ಯಾಪಕರಾಗಿ ಉಪಪ್ರಾಚಾರ್ಯರಾಗಿ ಪ್ರಾಚಾರ್ಯರಾಗಿ ಕೊನೆಗೆ ಕುಲಪತಿಗಳಾಗಿ ಮಾಡಿದ ಸೇವೆ ಅವಿಸ್ಮರಣೀಯ-ವಾದುದು. ಹೂವಿನೊಂದಿಗೆ ನಾರು ಸ್ವರ್ಗಕ್ಕೆ ಹೋದಂತೆ ನಾವಿಬ್ಬರೂ ದೇಹ ಬೇರಾಗಿದ್ದರೂ ಇಬ್ಬರ ಹೃದಯ ಒಂದೇ ಆಗಿತ್ತೆಂದು ಹೇಳಲು ಈ ಒಂದು ಮಾತು ಸಾಕು ಕುಲಪತಿ ಹುದ್ದೆ ಸ್ವೀಕರಿಸಲು, ಸಂಬಂಧಿಕರು-ಗೆಳೆಯರು-ಆತ್ಮೀಯರು ಹೇಳಿದರೂ ಕೇಳದೆ ಇದ್ದ ಡಾ॥ ಎಂ.ಎಸ್.ಬಿರಾದಾರರವರು ನಾನು ಒಂದು ಮಾತು ಹೇಳಿದಾಗ ಕುಲಪತಿ ಹುದ್ದೆ ಸ್ವೀಕರಿಸಿದಿರೆಂದರೆ ನಮ್ಮಿಬ್ಬರ ಬಾಲ್ಯ ಸ್ನೇಹ ಸೇತುವೆ ಭಾಗದಲ್ಲಿ ಸಿಲುಕಿ ಒಪ್ಪಿಕೊಂಡರೆಂದು ಹೇಳಲು ಹೆಮ್ಮೆನಿಸುತ್ತದೆ.

ವಿಜಯಪುರ ನಗರದಲ್ಲಿ ಗೋಡಬಾಳ ಮಾಲದಲ್ಲಿ ಡಾ॥ ಎಂ.ಎಸ್.ಬಿರಾದಾರ ಅವರು ಡಿಸೆಂಬರ್ ೭ ೧೯೯೨ರಲ್ಲಿ ಪರಿಶ್ರಮ ಎಂಬ ನಾಮದಿಂದ ಹಾಸ್ಪೀಟಲ್ ಕಟ್ಟಿಸಿ ಇಲ್ಲಿಯೇ ತಮ್ಮ ವೃತ್ತಿ ಮುಂದುವರಿಸಿದರು. ಯೋಗಾಯೋಗವೆನ್ನುವಂತೆ ನಾನು ಕೂಡ ಡೆಗ್ನೊಸ್ಟಿಕ್ ಸೆಂಟರ್‌ವನ್ನು ಗೋಡಬಾಳದಲ್ಲಿ ೮-೧೨-೧೯೯೩ರಲ್ಲಿ ಖರೀದಿಸಿದ ಮನೆಯಲ್ಲಿ ಪ್ರಾರಂಭಿಸಿದೆ. ಮುಂದೆ ನಾವಿಬ್ಬರೂ ಬಸವೇಶ್ವರ ನಗರದಲ್ಲಿ ಬಿ.ಎಲ್.ಡಿ.ಇ ಹಾಸ್ಪಿಟಲ್ ಎದುರಿಗೆ ಒಂದೇ ಜಾಗದಲ್ಲಿ ಇಬ್ಬರು ಖರೀದಿಸಿ ಮನೆ ಕಟ್ಟಿಸಿದೆವು. ನನಗೆ ಅನಿಸಿದಂತೆ ಹಿಂದಿನ ಜನ್ಮದಲ್ಲಿ ನಾವಿಬ್ಬರು ಏನಾಗಿದ್ದೇವು ಎಂಬ ಆಧ್ಯಾತ್ಮಿಕ ಶಕ್ತಿಯ ಬಗ್ಗೆ ಚಿಂತನ-ಮಂಥನ ಮಾಡುವಂತೆ ನಾವಿಬ್ಬರೂ ದೇಹ ಬೇರೆಯಾಗಿದ್ದರೂ ಅಂತರಂಗದ ಆತ್ಮ ಒಂದೇಯಾಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.



Scanned with CamScanner

ಉಕ್ಕಲಿ ಗ್ರಾಮ ಡೋಣಿ ಸೆರಗಿನ ಜೋಳ, ಗೋಧಿ, ಹತ್ತಿ, ಕಡಲೆ ಬೆಳೆಯುವ ಅರವತ್ತೂರು ನಂಬರ ಗೌಡಕಿ ನಮ್ಮದಾಗಿತ್ತು. ನಾನು ಹಾಗೂ ಎಂ.ಎಸ್.ಬಿರಾದಾರ ಕೂಡಿ ಉಕ್ಕಲಿಗೆ ಹೊರಟರೇ ಇವರೇನ ಗಳೆ ಹೊಡೆಯುವದನ್ನು ಬಿಟ್ಟು ದೊಡ್ಡ ಶಾಣ್ಯಾರಾಗಲು ಹೊರಟಾರೆಂದು ಶಾಲೆ ಕಲಿಲಾರದಂತೆ ಅಪಹಾಸ್ಯ ಮಾಡುತ್ತಿದ್ದರು. ಇಂಥ ಸಣ್ಣ ಕೃಷಿ ಕುಟುಂಬದಲ್ಲಿ ಜನಿಸಿದ ಎಂ.ಎಸ್.ಬಿರಾದಾರ ಕುಲಪತಿ ಹುದ್ದೆಗೆ ಹೋಗಿದ್ದು ಯೋಗಾಯೋಗವೇ ಸರಿ.

ನಮ್ಮಿಬ್ಬರ ಕಿರಿದಾದ (ಬಾಲ್ಯ) ಸ್ನೇಹದೊಂದಿಗೆ ಸಾಗಿ ಅಂದರೆ ಹಳ್ಳಿ (ಉಕ್ಕಲಿ) ಹಳ್ಳದಿಂದ ಪ್ರಾರಂಭವಾಗಿ ಮುಂದೆ ಹೊಳೆಯಾಗಿ ಹೆದ್ದೊರೆಯಾಗಿ ಈಗ ಸಮುದ್ರದ ಸಾಗರದಷ್ಟು ವಿಸ್ತಾರವಾಗಿ ಕೊನೆಗೆ ವಿಜಯಪುರದಲ್ಲಿ ಕಟ್ಟಿದ ಮನೆಗಳು ಮತ್ತು ಹಾಸ್ಪಿಟಲ್ ನಮ್ಮಿಬ್ಬರ ಮನಸ್ಸಿನ ಏಕತೆಯ ಸಾಕ್ಷಾತ್ಕಾರವಾಗಿ ನಿಂತುಕೊಂಡಿವೆ. ಅವರು ನಮ್ಮನ್ನಗಲಿದ್ದಾರೆ ಎಂಬ ಭಾವನೆ ಮೂಡದೆ ದಿನನಿತ್ಯ ಮಗ್ಗಲ ಮನೆಯಲ್ಲಿದ್ದಾರೆಂಬ ಭಾವನೆ ಇಂದಿಗೂ ಕಡಿಮೆಯಾಗಿಲ್ಲ ಹಾನೆ! ಬಾಲ್ಯ-ಯೌವನ-ಮುಪ್ಪು ಮುಪ್ಪರಿಗೊಳ್ಳುವ ಸಂದರ್ಭದಲ್ಲಿ ಆ ಭಗವಂತ ತನಗೆ ಬೇಕೆಂದು ಎತ್ತಿಕೊಂಡು ಹೋದಂತಾಗಿದೆ. ಕೆಲವರು ಇದ್ದು ಸತ್ತಿರುತ್ತಾರೆ. ಕೆಲವರು ಸತ್ತು ಇರುತ್ತಾರೆನ್ನುವುದಕ್ಕೆ ಡಾ॥ ಎಂ.ಎಸ್.ಬಿರಾದಾರರವರು ಬಾಲ್ಯದಿಂದ ಬಂದ ಸ್ನೇಹ ಸೇತುವೆ ಭೂಮಿಋಣ ತೀರಿಸದೆ ಆಕಾಶ ತೋರಿಸಲು ಮೇಲೆ ಹೋಗಿರಬೇಕೆಂಬ ಭಾವವಿದೆ.

•••